ಅವರೆಲ್ಲ ಜೈನ ತತ್ತ್ವಗಳನ್ನು ತಮ್ಮ ಕಾವ್ಯ ತತ್ತ್ವಗಳ ಮೂಲಕ ಮರುಪರಿಶೀಲನೆಗೆ ಒಡ್ಡಿದರು.

ಜಿ.ಎಸ್. ಶಿವರುದ್ರಪ್ಪನವರು ಒಂದು ಕಡೆ ರತ್ನಾಕರವರ್ಣಿ ಕುರಿತು 'ಯೋಗಭೋಗದ ತೊಡಕು' ಅಂತ ಬರೆದರು. ಒಂದು ಮಾಡರ್ನಿಸ್ಟ್ ಮೈಂಡ್ ಮಾಡುವ ದೊಡ್ಡ ತಪ್ಪಿದು. ಮೇಷ್ಟ್ರ ಬಗ್ಗೆ ಬಹಳ ಗೌರವ ನನಗೆ. ಅವರು ನನ್ನ ಗುರುಗಳು. ಆದರೆ, ಒಂದು ಆಧುನಿಕ ಮನಸ್ಸು ರತ್ನಾಕರವರ್ಣಿಯನ್ನು ತಪ್ಪಾಗಿ ಗ್ರಹಿಸಿತು. ಬಸವಣ್ಣನ ತತ್ತ್ವ ಕೂಡ ಇಂಥದ್ದೆ ಇದೆಯಲ್ಲವೆ. ಮೊದಲೇ ಬದುಕನ್ನು ಅರಿತುಕೊ. ಮುಪ್ಪಾಗುವ ಮುನ್ನ ಅರಿತುಕೊ ಅಂತ ಒಂದು ವಚನ ಇದೆಯಲ್ಲ. ಸಾಯುವ ಕಾಲದಲ್ಲಿ ನಾವೆಲ್ಲಾ ಒಂದು ಅಂತ ಹೇಳೋದಲ್ಲ ಅದು. ಯಾಕೆ ನಾವು ಇದನ್ನೆಲ್ಲ ಚರ್ಚೆಗೆ ತೆಗೆದುಕೊಳ್ಳೋದಿಲ್ಲ? ಇದು ಮೀಮಾಂಸೆಯ ಪ್ರಶ್ನೆ ಕೂಡ. ಜನ್ನನ 'ಯಶೋಧರ ಚರಿತೆ' ಇದೆಯಲ್ಲ. ಅದನ್ನು ನಮ್ಮ ಅನೇಕ ವಿದ್ವಾಂಸರು ವಿವಿಧ ಬಗೆಯಲ್ಲಿ ನೋಡಿದ್ದಾರೆ. ಕುವೆಂಪು ಇದನ್ನ 'ಕಾಮವಿಕಾರದ ನಿರೂಪಣೆ' ಅಂತೆಲ್ಲ ಕರೆದರು. ಟೈಟಲಲ್ಲೇ ಅವಳನ್ನ ಸಾಯಿಸಿಬಿಟ್ರು, ಪಾಪ. ನೈತಿಕವಾದಂಥ ಒಂದು ಓದಿಗೆ ಕುವೆಂಪು ಒಡ್ಡಿಕೊಂಡಿದ್ದರಿಂದ ಅವರಿಗೆ ಹೀಗೆ ಕಂಡುಬಂತು. ವಿಮರ್ಶಕ ಗಿರಡ್ಡಿ ಗೋವಿಂದರಾಜ ಅವರಲ್ಲಿ ರೂಪನಿಷ್ಠ ಓದಿನ ಕ್ರಮವೊಂದಿದೆ. ಅನೇಕ ಓದುಗಳಿದ್ದಾವೆ. ಅಮೇಲೆ ಅನೇಕರು ಅಮೃತಮತಿ ಮಾಡಿದ್ದು ತಪ್ಪೆ? ಸರಿಯೆ? ಎಂಬ ಪ್ರಶ್ನೆಯನ್ನು ನೂರಾರು ಬಾರಿ ಕೇಳಿಕೊಂಡು ಒದ್ದಾಡಿದ್ದಾರೆ. ಪಾಪ ಅಮೃತಮತಿಯೇ ಇದರ ಬಗ್ಗೆ ಅಷ್ಟು ತಲೆ ಕೆಡಿಸಿಕೊಳ್ಳಲಿಲ್ಲ. ಇದರ ಬಗ್ಗೆ ಕನ್ನಡದಲ್ಲಿ ಭಾಳ ದೊಡ್ಡ ಚರ್ಚೆ ನಡೆದಿದೆ. ಈಗ ನಾವು ಗಮನಿಸಬೇಕಾದದ್ದು ಈ ಕಾವ್ಯದ ಸ್ಟ್ರಕ್ಚರ್ ಏನದು? ಅಮೃತಮತಿ ಈ ಕಾವ್ಯದ ಕೇಂದ್ರವೆ? ಅಥವಾ ಯಶೋಧರನೆ? ಅಥವಾ ಅಷ್ಟಾವಂಕನೆ? ಅಥವಾ ಜೈನ ತತ್ತ್ವವೆ? ನೋಡಿ, ಕಾವ್ಯ ಎಷ್ಟು ಸಂಕೀರ್ಣವಾಗಿದೆ. ಅದಕ್ಕೆ ನಾನು ಹೇಳಿದ್ದು ಇಲ್ಲಿ ಅನೇಕಾಂತವಾದದ ತತ್ತ್ವವನ್ನು ಕಾವ್ಯದ ಅಧ್ಯಯನ ವಿಧಾನವಾಗಿಯೂ ಬಳಸಬಹುದಲ್ಲವೆ? ಹಲವು ಬಗೆಯ ತಿಳಿವಳಿಕೆಯಿಂದ ನಾವು ಈ ಕಾವ್ಯಕ್ಕೆ ಪ್ರವೇಶ ಮಾಡಿದ್ರೆ ನಿಮಗೆ ಹಲವು ಒಳನೋಟಗಳು ತಿಳೀಲಿಕ್ಕೆ ಸಾಧ್ಯ. ಈ ಕಾವ್ಯದಲ್ಲಿ ಅನೇಕ ಕಡೆ ಹಿಂಸೆಯ ವರ್ಣನೆ ಇದೆ. ಅದರಲ್ಲೂ ಅನೇಕ ಭವಾವಳಿಯಲ್ಲಿ ಇದು ಇನ್ನೂ ಹೆಚ್ಚಿಗಿದೆ. ಹಿಂಸೆಯ ವಿರುದ್ಧ ಕಾವ್ಯ ದನಿ ಎತ್ತುತ್ತಿದೆ. ತೀವ್ರವಾದ ಹಿಂಸೆಯ ರೂಪಕಗಳು ಮತ್ತು ತೀವ್ರವಾದ ಅಹಿಂಸೆಯ ರೂಪಕಗಳು ಕಾವ್ಯದಲ್ಲಿ ಒಟ್ಟಿಗೆ ಬಂದಿವೆ. ಕಾವ್ಯ ಯಾಕೆ ಎರಡೂ ಸ್ಥಿತಿಗಳನ್ನು ತೀವ್ರವಾಗಿ ಇಡ್ತಾ ಇದೆಯೆಂಬ ಪ್ರಶ್ನೆಯನ್ನೂ ಕೇಳಿಕೊಳ್ಳಬೇಕು. ಈ ಹಿಂಸೆಗೆ ಕಾರಣವಾದವಳು ಅಮೃತಮತಿ. ಘಟನೆಗಳ ವರ್ಣನೆ ಕವಿತೆಯ ಆಶಯದ ಆಚೆ ಈ ಕಾವ್ಯದ ಒಳಗೇ ಬೆಳೆದುಬಿಟ್ಟಿದೆ. ಅಮೃತಮತಿ ಕುರಿತು ಒಂದು ಕಂದಪದ್ಯವಿದೆ. ಅಮೃತಮತಿಯೆಂಬ ಮುಖದರ್ಪಣದಲ್ಲಿ ಈ ದೊರೆ ತನ್ನ ಭುಜಬಲ ಪರಾಕ್ರಮವನ್ನು ನೋಡುತ್ತಿದ್ದ ವರ್ಣನೆ ಅದು. ನೋಡಿ, ಕಾವ್ಯ ಎಷ್ಟೆಲ್ಲ ವಿಚಿತ್ರ ಸ್ಥಿತಿಗಳನ್ನು ತನ್ನ ವರ್ಣನೆಯಲ್ಲಿ ಹೇಳಿಬಿಟ್ಟಿದೆ. ಅಮೃತಮತಿ ಆತನಿಗೆ ಕೇವಲ ಒಂದು ದರ್ಪಣ. ಅದೂ ತನ್ನನ್ನು ತಾನು ನೋಡಲು ಇರುವ ದರ್ಪಣ. ಆ ಭುಜಬಲ ಪರಾಕ್ರಮದ ಪರೀಕ್ಷೆಗೆ ಇವಳೊಂದು ನೆಪಮಾತ್ರ. ಹೀಗಾದಾಗ ಅವಳು ಇವನನ್ನು ಪ್ರೀತಿಸುವುದು ಹೇಗೆ? ಕಾವ್ಯ ಕಾಣಿಸುತ್ತಿರುವ ಬಿರುಕು ಅರ್ಥಮಾಡಿಕೊಳ್ಳಬೇಕು. ಅವರಿಬ್ಬರ ಸಂಬಂಧದಲ್ಲಿ ಒಂದು ಮಾರ್ದವತೆ ಇಲ್ಲ. ಒಂದು ಬಗೆಯ ಯಾಂತ್ರಿಕತೆ ಇದೆ. ಬಹಳ ಘೋರವಾದ ಉಪಮೆಗಳನ್ನ ಜನ್ನ ತರ್ತಾನೆ. ಮದಗಜಗಳ ಸಂಕೇತ ತರ್ತಾನೆ. ನಿದ್ರೆ ಅನ್ನುವುದೇ ಅವಳಿಗೆ ಒಂದು ಹೊಲಸು. ಮಾವುತನ ಹಾಡು ಕಥಕ ಬೀಜ (ಹೊಲಸು ನೀರನ್ನು ತಿಳಿ ಮಾಡುವ ಬೀಜ) ಆಯ್ತು. ಅಂದರೆ, ಆ ಹೊಲಸಾದ ನೀರನ್ನು ತಿಳಿ ಮಾಡಿತು. ನೋಡದೇ ಇರುವಂಥವನನ್ನು ಆ ಹಾಡು ಕೇಳಿ ತನ್ನ ಹೃದಯವನ್ನೇ ಕೊಟ್ಟಳು. ಇಲ್ಲಿನ ಹೆಸರುಗಳಿಗೆಲ್ಲ ಒಂದು ಸಾಂಕೇತಿಕ ಅರ್ಥ ಇದೆ. ಅಷ್ಟಾವಂಕ ನಮ್ಮ ಪುರಾಣ ಪಾತ್ರಗಳಲ್ಲಿ ಬರುವ ದೊಡ್ಡ ಪಂಡಿತ. ಅವನ ಅಷ್ಟ ಅಂಗಗಳು ವಕ್ರವಾಗಿದ್ದವಂತೆ.